# ಮುಂಗಾರು ಮಹಿಮೆ!

ಹಸಿರು ಸಿಂಗರಿಸಿಕೊಂಡು ನಿಂತಿರುವ ಈ ಬಸ್ಸು ನೋಡಿ ಯಾವುದೋ ಮದುವೆಯ ದಿಬ್ಬಣಕ್ಕೆ ಹೊರಟು ನಿಂತಿದೆ ಅಂದುಕೊಳ್ಳಬೇಡಿ. ವಿಷಯ ಬೇರೆಯೇ ಇದೆ. ಉಡುಪಿ– ಮಂಗಳೂರು ರಸ್ತೆಯಲ್ಲಿ ಸರ್ಕಾರಿ ಬಸ್‌ಗಳಿಗಿಂತ ಖಾಸಗಿ ಬಸ್‌ಗಳದ್ದೇ ಪಾರಮ್ಯ. ಕ್ಷಣ ಕ್ಷಣಕ್ಕೂ ಓಡಾಡುವ ಖಾಸಗಿ ಬಸ್‌ಗಳು ಕೊರೊನಾ ಕಾರಣದಿಂದ ಓಡಾಟ ನಿಲ್ಲಿಸಿವೆ. ಕಳೆದ ನಾಲ್ಕೈದು ತಿಂಗಳಿನಿಂದ ಬಸ್ಸುಗಳು ಗ್ಯಾರೇಜು ಸೇರಿವೆ.

ಈ ಬಸ್ಸು ಕೂಡ ತನ್ನ ಎಡಬಿಡದ ಓಡಾಟದಿಂದ ಬಿಡುವು ಪಡೆದುಕೊಂಡು ಮಾಲೀಕರ ಮನೆ ಆವರಣದಲ್ಲಿ ವಿಶ್ರಾಂತಿ ಪಡೆಯುತ್ತಿದೆ. ಹಬ್ಬಿ ನಗುವ ಹಸಿರಿಗೆ ಯಾವ ರೋಗ? ಯಾವ ಲಾಕ್‌ಡೌನ್ ಹೇಳಿ? ಮುಂಗಾರು ಮಳೆ ನೆಲವ ನೆನೆಸಿದ್ದೇ ಮಣ್ಣೊಳಗಿಂದ ಯಾರದೋ ಕರೆಗೆ ಓಗುಟ್ಟಂತೆ ಹಸಿರು ಚಿಗಿತಿದೆ. ಆಸರೆಗೆ ಸಿಕ್ಕ ಬಸ್ಸನ್ನೇ ತಬ್ಬಿ ಬೆಳೆದ ತಲೆ ಬಸ್ಸಿಗೆ ಅಲಂಕಾರ ಮಾಡಿದಂತಿದೆ. ಇಂತಹ ಅದೆಷ್ಟು ಬಸ್‌ಗಳು ಇರಬಹುದೊ?

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ






# ವಿಶಿಷ್ಟ ಶೈಲಿಯ ಕುರ್ಚಿ

ಈ ಕುರ್ಚಿ ಕಾಲುಗಳನ್ನು ಚೌಕಾಕಾರದ ಬದಲಿಗೆ ವಜ್ರಾಕಾರದ ಪೀಠಕ್ಕೆ ಜೋಡಿಸಲಾಗಿದೆ. ಮೇಜಿನ ಒಳಭಾಗದವರೆಗೆ ಎಳೆದು ಕುಳಿತು, ಸೂಕ್ಷ್ಮವಾದ ಕೆಲಸಗಳನ್ನು ಮಾಡಲು ಈ ವಿಭಿನ್ನ ಮಾದರಿಯ ಕುರ್ಚಿಯನ್ನು ಬಳಸುತ್ತಿದ್ದರು. ಕರಕುಶಲದಿಂದ ಮರದಲ್ಲಿ ಮೂಡಿಸಿದ ಕಲಾತ್ಮಕ ಕೆತ್ತನೆ, ವಿನ್ಯಾಸ ಹಾಗೂ ನಾಜೂಕಾಗಿ ನಯಗೊಳಿಸಿ ನೀಡಿರುವ ಹೊಳಪು ಇದರ ಅಂದ ಹೆಚ್ಚಿಸಿದೆ. ಅಂದಿನ ಕುಶಲಕರ್ಮಿಗಳ ತಾಳ್ಮೆ, ಉತ್ಕೃಷ್ಟತೆ ಮತ್ತು ಹೆಮ್ಮೆಯ ಪರಿಪೂರ್ಣ ಕಲಾಕೃತಿಯಾಗಿ ನೋಡಬಹುದು.

ಉಡುಪಿಯ ಸಮೀಪದ ಮಾಯಾಗುಂಡಿಯಲ್ಲಿ ಕೃಷ್ಣಮೂರ್ತಿ ಭಟ್ ಅವರಲ್ಲಿ ಇಂತಹ ಅಪರೂಪದ ಪಾರಂಪರಿಕ ವಸ್ತುಗಳ ಉತ್ತಮ ಸಂಗ್ರಹಾಲಯವೇ ಇದೆ.

–ರಮೇಶ್ ಬಿ.ಎಂ., ಬೆಂಗಳೂರು

# ಹುತ್ತಕ್ಕೆ ಹೂ

ಇದು ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಗ್ರಾಮದ ಮಾದೇಗೌಡರು ಎನ್ನುವ ರೈತರ ತೋಟದಲ್ಲಿ ಕಂಡುಬಂದ ಅಣಬೆ. ಇದನ್ನು ಹುತ್ತದ ಅಣಬೆ ಎನ್ನುತ್ತಾರೆ. ಇದರ ಸೇವನೆ ಆರೋಗ್ಯಕ್ಕೆ ಒಳ್ಳೆಯದು ಎನ್ನುತ್ತಾರೆ ಹಳ್ಳಿಯವರು. ಆದರೆ ಬೇಕೆಂದಾಗಲೆಲ್ಲ ಸಿಗುವಂತದ್ದಲ್ಲ. ಅಪರೂಪದ ಆಹಾರ ಇದು. ಹಾಲು ಚೆಲ್ಲಿದಂತೆ ಕಾಣುವ ಈ ಅಣಬೆ ಮಳೆಗಾಲದ ಆರಂಭದ ದಿನಗಳಲ್ಲಿ ಮಾತ್ರ ಸಿಗುತ್ತವೆ. ಇವುಗಳ ಆಯುಷ್ಯ ಕೇವಲ ಎರಡು ಮೂರು ದಿನ. ಇದನ್ನು ಕೆಲವರು ಮಾಂಸಾಹಾರ ಎಂದೇ ಭಾವಿಸಿ ಸೇವಿಸುವುದಿಲ್ಲ.

–ವೇದಾವತಿ ಎಂ., ಕೆ.ಆರ್.ಪೇಟೆ

